೧೯೭೧ನೇ ಜನಗಣತಿ ಪ್ರಕಾರ ೧೦,೦೦೦ಕ್ಕಿಂತ ಕೆಲವು ನೂರು ಮಾತ್ರ ಜನಸಂಖ್ಯೆ ಜಾಸ್ತಿ ಎಂಬ ಕಾರಣದಿಂದ ಪರಿವರ್ತನೆ ನಿರಾಕರಿಸಲಾಯಿತು. ಆದರೆ, ೧೨,೦೦೦ ಜನಸಂಖ್ಯೆಗೆ ಮಿಕ್ಕಿ ಇದ್ದರೂ ಸಹ ಕೆಲವು ಕಡೆ ಹೊಸ ಮಂಡಲ ಪಂಚಾಯತುಗಳನ್ನು ರಚಿಸಲಾಯಿತು. ಈ ವಿಚಾರ ಕಳೆದ ಅಧಿವೇಶನದಲ್ಲಿ ಸರಕಾರದ ಗಮನಕ್ಕೆ ತಂದಾಗ, ಅರ್ಹತೆ ಇದ್ದಲ್ಲಿ ಇಂತಹ ಪ್ರಸಂಗಗಳಲ್ಲಿ ವಿಶೇಷವಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂಬ ಆಶ್ವಾಸನೆ ಬಂದಿತ್ತು. ಆ ಎರಡೂ ಪುರಸಭೆಗಳು ಮಂಡಲ ಪಂಚಾಯತಿಗಳಾಗಿ ಪರಿವರ್ತನೆಗೊಳ್ಳಲು ನಿರ್ಣಯಿಸಿದ್ದು, ಈ ವಿಚಾರದಲ್ಲಿ ಅಲ್ಲಿನ ಶಾಸಕರು ಕೂಡ ಸಂಬಂಧಪಟ್ಟವರ ಗಮನ ಸೆಳೆದಿದ್ದು, ಜಿಲ್ಲಾಧಿಕಾರಿಗಳ ಮಟ್ಟದಿಂದ ಅವಶ್ಯವುಳ್ಳ ವರದಿ ಕೂಡ ಸರಕಾರಕ್ಕೆ ಬಂದಿದೆಯಾಗಿ ತಿಳಿಯುತ್ತೇವೆ. ಈ ಎರಡೂ ಪುರಸಭೆಗಳ ವಲಯದ ಜನ ಗ್ರಾಮಾಂತರ ಅಭಿವೃದ್ಧಿಯು ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರುವುದರಿಂದ ಈ ವಿಚಾರ ಪುನರ್ ಪರಿಶೀಲಿಸಿ, ಬೈಂದೂರು ಹಾಗೂ ಸಾಲಿಗ್ರಾಮ ಪುರಸಭೆಗಳನ್ನು ಮಂಡಲ ಪಂಚಾಯತಿಗಳೆನ್ನಾಗಿ ಪರಿವರ್ತಿಸಬೇಕಾಗಿ ಒತ್ತಾಯಿಸುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ೧೯೭೧ನೇ ಇಸವಿಯ ಜನಗಣತಿಯ ಪ್ರಕಾರ ೧೦ ಸಾವಿರಕ್ಕಿಂತಲೂ ಕಡಿಮೆ ಜನಸಂಖ್ಯೆ ಇದ್ದರೆ, ಅವುಗಳನ್ನು ಮಂಡಲ ಪಂಚಾಯತಿಗಳಾಗಿ ಮಾಡುತ್ತೇವೆ ಎಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಬಹುಶಃ ಈ ಎರಡು ಊರುಗಳಲ್ಲಿ ಸ್ವಲ್ಪ ಜಾಸ್ತಿ ಇರಬಹುದು. ಮಾನ್ಯ ಸದಸ್ಯರು ಜಿಲ್ಲಾಧಿಕಾರಿಗಳು ವರದಿಯನ್ನು ಕಳುಹಿಸಿದ್ದಾರೆ ಎಂದು ಹೇಳುತ್ತಾರೆ. ಅದನ್ನು ನೋಡಿ ಕಾನೂನು ಪ್ರಕಾರ ಏನು ಮಾಡಬೇಕೋ, ಆ ಕ್ರಮ ಗಳನ್ನು ತೆಗೆದುಕೊಳ್ಳುತ್ತೇವೆ. ಇದು ಪೂರಕವಾದಂತಹ ಉತ್ತರ. ಉಪ ಉತ್ತರ ಏನೆಂದರೆ, ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್ ಚುನಾವಣೆಗಳು ಮುಂದೆ ಹೋಗುತ್ತಾ ಕೊನೆಗೆ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಆಯಿತು. ಆ ಕಾರಣಗಳಿಂದ ಸ್ವಲ್ಪ ತಡವಾಗಿರಬಹುದು. ಜಿಲ್ಲಾಧಿಕಾರಿಯವರ ವರದಿ ತರಿಸಿ, ಆ ಬಗ್ಗೆ ಏನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುತ್ತೇನೆ.

(೧೦) ಹೊಸದುರ್ಗದಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಯಲ್ಲಿ ನಡೆದ ಅಕ್ರಮಗಳು

೪-೨೦ ಪಿ. ಎಂ.

ಶ್ರೀ ಜಿ. ರಾಮದಾಸ್.—ಮಾನ್ಯ ಅಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ನಡೆದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆಯಲ್ಲಿ ವ್ಯಾಪಕ ರೀತಿಯಲ್ಲಿ ಗುರುತರ ಅಕ್ರಮಗಳು ನಡೆದಿವೆ.

ಜಿಲ್ಲಾ ಪರಿಷತ್ತಿನ ಚುನಾವಣೆಯಲ್ಲಿ ಶ್ರೀರಾಂಪುರ ಕ್ಷೇತ್ರದ ಮಹಿಳಾ ಸ್ಥಾನಕ್ಕೆ ನಡೆದ ಮತದಾನ ದಲ್ಲಿ ಕಬ್ಬಳ ಮತಗಟ್ಟೆಯಲ್ಲಿ ಅಧಿಕಾರಿಯೇ ೫೦ ಮತಗಳನ್ನು ಜನತಾ ಪಕ್ಷಕ್ಕೆ ಒತ್ತಿ ಅಕ್ರಮವಾಗಿ ಚಲಾಯಿಸಿದ್ದಾರೆ. ಕಾನೂನು ಬಾಹಿರ ಘಟನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ. ಅಧಿಕಾರಿಗಳು ಶಾಮೀಲಾಗಿ ತಾಲ್ಲೂಕಿನ ೬ ಕಡೆಗಳಲ್ಲಿ ಅವ್ಯವಹಾರ ನಡೆದಿರುವುದನ್ನು ಮರೆಮಾಚಲಾಗಿದೆ.

ಭಾರಿ ಪ್ರಮಾಣದಲ್ಲಿ ಜನತಾ ಪಕ್ಷದವರು ಬೋಗಸ್ ಓಟು ಚಲಾಯಿಸಲು ಪ್ರಯತ್ನಿಸಿದ್ದಾರೆ. ಬಾಗೂರು ಕ್ಷೇತ್ರದಲ್ಲಿ ದೀನದಲಿತರು ಮತ ಚಲಾಯಿಸದಂತೆ ಅಡ್ಡಿಪಡಿಸಲಾಗಿದೆ. ಹೊಸದುರ್ಗ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿ ಅನೇಕ ಹಳ್ಳಿಗಳ ಹರಿಜನರ ಹೆಸರುಗಳನ್ನು ಕೈಬಿಡಲಾಗಿದೆ. ಈ ಚುನಾವಣೆಗೆ ಜನತಾ ಪಕ್ಷದ ಗೆಲುವಿಗಾಗಿ ಕ್ಷೇತ್ರಗಳ ವಿಂಗಡನೆಯಲ್ಲಿ ಏಕಪಕ್ಷೀಯವಾಗಿ ತಾರತಮ್ಯ ಮಾಡಿದೆ.

ದುರ್ಬಲರೇ ವಾಸವಾಗಿರುವ ಎಲ್ಲ ಬೋವಿಹಟ್ಟಿ ಮತಕೇಂದ್ರವನ್ನು ದುರುದ್ದೇಶದಿಂದ ಬೇರೆ ಕಡೆಗೆ ಸ್ಥಳಾಂತರಿಸಿದೆ. ಚುನಾವಣಾ ಕಾರ್ಯಕ್ಕೆ ತಮಗೆ ಬೇಕಾದ ಅಧಿಕಾರಿಗಳನ್ನೇ ನೇಮಿಸಲಾಗಿದೆ.

ಮತ್ತೋಡು ಕ್ಷೇತ್ರದ ಜಿಲ್ಲಾ ಪರಿಷತ್ತಿನ ಮತ ಎಣಿಕೆಯಲ್ಲಿ ಮೋಸದಿಂದ ಫಲಿತಾಂಶ ಪ್ರಕಟಿಸಿ ಜನತಾ ಪಕ್ಷಕ್ಕೆ ಲಾಭ ಪಡೆಯಲಾಗಿದೆ. ಈ ತಾಲ್ಲೂಕಿನ ಜಿಲ್ಲಾ ಪರಿಷತ್ತಿನ ಒಂದು ಸ್ಥಾನಕ್ಕೆ ಸ್ಪರ್ಧಿಸಿ ಆಯ್ಕೆಯಾದ ಜನತಾ ಅಭ್ಯರ್ಥಿ ಚುನಾವಣಾ ಆಯೋಗದಿಂದ ಡಿಬಾರ್ ಆಗಿದ್ದರೂ ನಾಮಪತ್ರ ಸ್ವೀಕೃತಗೊಳಿಸಿದೆ. ಈ ಪ್ರಕರಣಗಳ ಬಗ್ಗೆ ಸರ್ಕಾರವು ಸಮಗ್ರ ತನಿಖೆ ನಡೆಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—ಅಧ್ಯಕ್ಷರೇ, ಮಾನ್ಯ ಸದಸ್ಯರು ಪಾಸ್ತವಲೋಕ ಬಿಟ್ಟು ಕಲ್ಪನಾಲೋಕದಿಂದ ಅಪಾದನೆಗಳನ್ನು ಮಾಡಿದ್ದಾರೆ. ಇದರಲ್ಲಿ ಸಾಸಿವೆ ಕಾಳಿನಷ್ಟೂ ನಿಜಾಂಶ ಇಲ್ಲ. ಒಂದು ವೇಳೆ ಅಪಾದನೆಗಳು ಅವರ ದೃಷ್ಟಿಯಲ್ಲಿ ಸರಿಯೆಂದಿದ್ದರೆ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ದಾರಿ ಇದೆ ಎಂಬ ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ.

(೧೧) ಧಾರವಾಡದ ಎ. ಎನ್. ಎಂ. ನರ್ಸಿಂಗ್ ಶಾಲೆಯ ವಿದ್ಯಾರ್ಥಿಗಳಿಂದ ಅನ್ನ ಸತ್ಯಾಗ್ರಹ.

ಶ್ರೀಯುತರಾದ ಚಿಂದ್ರಶೇಖರ ಪಾಟೀಲ, ಚಂದ್ರಕಾಂತ ಬೆಲ್ಲದ ಮತ್ತು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಧಾರವಾಡದ ಎ. ಎನ್. ಎಂ. ನರ್ಸಿಂಗ್ ಸ್ಕೂಲಿನ ಪ್ರಿನ್ಸಿಪಾಲ್ ಶ್ರೀಮತಿ ರಮಾಭಂಡಾರಿ ಇವರ ದುರ್ನಡತೆಯಿಂದ ಸಹಾಯ ತರಬೇತಿ ಆರೋಗ್ಯ ವಿದ್ಯಾರ್ಥಿನಿಯರಿಗೆ ಮಾಡುತ್ತಿರುವ ಅನೈತಿಕ ಪ್ರಚೋದನೆ ಹಾಗೂ ವಿವಿಧ ಹಿಂಸೆಗಳಿಂದ ರೋಸಿಹೋದ ವಿದ್ಯಾರ್ಥಿನಿಯರು ಕಳೆದ ಮೂರು ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅನೇಕ ಪತ್ರಿಕೆಗಳಲ್ಲಿ ಈ ಸುದ್ದಿ ಬಂದಿದೆ. ಅಲ್ಲದೆ ಶ್ರೀ ಎಸ್. ಆರ್. ಬೊಮ್ಮಾಯಿ ಮತ್ತು ಶ್ರೀ ಹೆಚ್. ಡಿ. ದೇವೇಗೌಡ ಅವರು ಅಲ್ಲಿಗೆ ಭೇಟಿ ಕೊಟ್ಟಾಗ ವಿದ್ಯಾರ್ಥಿನಿಯರು ಅವರೆದುರು ಕಣ್ಣೀರು ಹಾಕಿ ತಮಗಾಗಿರುವ ತೊಂದರೆ ಬಗ್ಗೆ ದುಃಖ ವ್ಯಕ್ತಪಡಿಸಿದ್ದಾರೆ. ಕಾರಣ ರಮಾ ಭಂಡಾರಿ ಅವರನ್ನು ಕೂಡಲೇ ಸಸ್ಪೆಂಡ್ ಮಾಡಿ ವಿಚಾರಣೆಗೆ ಗುರಿಪಡಿಸಬೇಕು. ವಿದ್ಯಾರ್ಥಿನಿಯರಿಗೆ ಭದ್ರತೆ ವ್ಯವಸ್ಥೆ ಆಗಬೇಕು ಮತ್ತು ಸಿವಿಲ್ ಸರ್ಜನ್ಸರಿಗೆ ಅನೇಕ ಜೀವ ಬೆದರಿಕೆಯ ಫೋನ್ ಕರೆಗಳು ಮೇಲಿಂದ ಮೇಲೆ ಬರುತ್ತಿವೆ. ಅವರಿಗೂ ಸಹ ಭದ್ರತೆ ಒದಗಿಸಿಕೊಡಬೇಕು. ಇದರ ಸಲುವಾಗಿ ಸಾರ್ವಜನಿಕರು ದೂರು ಕೊಟ್ಟಿದ್ದನ್ನು ಪರಿಗಣಿಸಿ ನ್ಯಾಯ ಒದಗಿಸಿಕೊಡಬೇಕೆಂದು ಕೋರುತ್ತೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಸಚಿವರು).—ಈಗಾಗಲೇ ಆರೋಪಿಗಳ ಬಗ್ಗೆ ಮಾಹಿತಿಗಳನ್ನು ತರಿಸಿಕೊಂಡಿದ್ದೇನೆ. ಅಲ್ಲದೆ ಆರೋಪಿಯನ್ನು ವಿಚಾರಣೆಗೆ ಗುರಿಪಡಿಸಲಾಗಿದೆ. ಮತ್ತು ಆಕೆಯನ್ನು ಅಮಾನತ್ತಿನಲ್ಲಿಡಲಾಗಿದೆ. ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶಾಸನ ರಚನಾ ಕಾರ್ಯ ಕಲಾಪಗಳು

ಕರ್ನಾಟಕ ಮನರಂಜನಾ ತೆರಿಗೆಗಳು (ತಿದ್ದುಪಡಿ) ವಿಧೇಯಕ ೧೯೮೭

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಂಸದೀಯ ಖಾತೆ ಹಾಗೂ ನಗರಾಭಿವೃದ್ಧಿ ಸಚಿವರು, ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು ಅವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೭ ಅನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಕರ್ನಾಟಕ ಮನರಂಜನಾ ತೆರಿಗೆಗಳು (ತಿದ್ದುಪಡಿ) ವಿಧೇಯಕ ೧೯೮೭'' ಅದನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಹಾಗೂ ಆಹಾರ ಸಚಿವರು, ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೭ ಅನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

---

* ANNEXURE